ಲಾರಿ ಅಪಘಾತದಲ್ಲಿ ಮೃತರಾದವರಿಗೆ ಪರಿಹಾರ ನೀಡುವುದು

೨೦೭೮. ಶ್ರೀ ಶ್ರೀರಂಗದೇವರಾಯಲು (ಕನಕಗಿರಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ ೧೩-೪-೮೮ರಂದು ಸಿಂದನೂರು ತಾಲ್ಲೂಕು ಉಮಲೂಟಿ ಗ್ರಾಮದ ಹತ್ತಿರ ನಗರ ನೀರು ಸರಬರಾಜು ವಿಭಾಗದ ಲಾರಿ ಅಪಘಾತಕ್ಕೊಳಗಾಗಿದ್ದು ೧೪ ಜನರು ಸ್ಥಳದಲ್ಲೇ ಮೃತಪಟ್ಟು ಸುಮಾರು ೪೫ ಜನ ಗಾಯಗೊಂಡು ಬಳ್ಳಾರಿ ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಸೇರಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಕಾರ್ಮಿಕರ ಕಾಯ್ದೆಯ ಪ್ರಕಾರ ಮೃತಪಟ್ಟವರಿಗೆ ೨೦ ಸಾವಿರ ರೂಪಾಯಿ ಗಳನ್ನು ಹಾಗೂ ಗಾಯಗೊಂಡವರಿಗೆ ೧೦ ಸಾವಿರ ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ಕೊಡ ಬೇಕಾಗಿರುವುದು ನಿಜವಲ್ಲವೆ.

ಇ) ಹಾಗಿದ್ದಲ್ಲಿ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು

ಆ) ಈ ವಿಷಯದ ಪರಿಹಾರ ಕೊಡಬೇಕೆಂದು ಕಾರ್ಮಿಕ ಕಾಯಿದೆಯಲ್ಲಿ ಅವಕಾಶ ಇಲ್ಲ.

ಇ) ೧.೭೦ ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಕೊಡಲಾಗಿದೆ.

ರಾಜ್ಯದಲ್ಲಿ ಹೆಂಗಸರುಗಳ ಮೇಲಿನ ಅತ್ಯಾಚಾರದ ಬಗ್ಗೆ

೨೧೩೦. ಶ್ರೀಮತಿ ಸುಮಾ ವಸಂತ್ (ವೀರಾಜ ಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಐದು ವರ್ಷಗಳಿಂದ ಹೆಂಗಸರ ಮೇಲೆ ನಡೆದ ಅತ್ಯಾಚಾರಗಳ ಒಟ್ಟು ಸಂಖ್ಯೆ ಎಷ್ಟು?

(ಜಿಲ್ಲಾವಾರು ವಿವರ ನೀಡುವುದು)

ಆ) ಇದರಲ್ಲಿ ಪೋಲಿಸ್ ಇಲಾಖೆಯವರಿಂದ ಹೆಂಗಸರ ಮೇಲೆ ನಡೆದ ಅತ್ಯಾಚಾರದ ಒಟ್ಟು ಸಂಖ್ಯೆ ಎಷ್ಟು?

(ಜಿಲ್ಲಾವಾರು ವಿವರ ನೀಡುವುದು)

ಇ) ಈ ಬಗ್ಗೆ ಸರಕಾರ ತಪ್ಪಿತಸ್ಥರ ಮೇಲೆ ತೆಗೆದುಕೊಂಡ ಕ್ರಮವೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ೧೫೫, ೦೧೫೫ ಪ್ರಕರಣಗಳು (ಪಟ್ಟಿ ಲಗತ್ತಿಸಿದೆ)

ಆ) ೩೬ ಪ್ರಕರಣಗಳು (ಪಟ್ಟಿ ಲಗತ್ತಿಸಿದೆ)

ಇ) ತಪ್ಪಿತಸ್ಥರ ಮೇಲೆ ಭಾರತೀಯ ದಂಡ ಸಂಹಿತೆಯ ಅನ್ವಯ ಪ್ರಕರಣಗಳನ್ನು ದಾಖಲು ಮಾಡಿಕೊಂಡು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಅಪರಾಧ ನಿರ್ಣಯದ ವಿವರಗಳು ಸದ್ಯದಲ್ಲಿ ಲಭ್ಯವಿಲ್ಲ ಇದನ್ನು ಪ್ರತ್ಯೇಕವಾಗಿ ಒದಗಿಸಲಾಗುವುದು.

೧೯೮೩ ರಿಂದ ೧೯೮೭ರ ವರೆಗೆ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆದ ಅತ್ಯಾಚಾರಗಳಲ್ಲಿ ಪೋಲೀಸ್ ಸಿಬ್ಬಂದಿ ಒಳಗೊಂಡ ಪ್ರಕರಣಗಳ ಜಿಲ್ಲಾವಾರು ಸಂಖ್ಯೆ.

೧೯೮೩ ರಿಂದ ೧೯೮೭ರವರೆಗೆ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆದ ಅತ್ಯಾಚಾರ ಪ್ರಕರಣಗಳ ಜಿಲ್ಲಾವಾರು ಸಂಖ್ಯೆ